# ನೆಟ್‌ಫ್ಲಿಕ್ಸ್‌ನಲ್ಲಿ ಜಯಂತತನದ ನವಿರು ಮೊಹರು!



ಇತ್ತೀಚೆಗೆ ನೆಟ್‌ಫ್ಲಿಕ್ಸ್‌ನಲ್ಲಿ 'ಅನ್‌ಕಹಿ ಕಹಾನಿಯಾ' ಎಂಬ ಹಿಂದಿಯ ಆ್ಯಂಥಾಲಜಿಯೊಂದು ಬಿಡುಗಡೆಯಾಗಿದೆ. ಮೂರು ಕಥೆಗಳಿರುವ ಈ ಆಂಥಾಲಜಿ ಕನ್ನಡಿಗರಿಗೆ ವಿಶೇಷವೆನ್ನಿಸಲು ಕಾರಣವೊಂದಿದೆ. ಉಳಿದೆರಡು ಚಿತ್ರಗಳ ಮಧ್ಯದಲ್ಲಿರುವ ಚಿತ್ರ, ಕನ್ನಡದ ಜನಪ್ರಿಯ ಕವಿ–ಕಥೆಗಾರ ಜಯಂತ ಕಾಯ್ಕಿಣಿ ಅವರ 'ಮಧ್ಯಂತರ' ಎಂಬ ಸಣ್ಣಕಥೆಯನ್ನು ಆಧರಿಸಿದ್ದು.

ಎಂಬತ್ತರ ದಶಕದ ಮುಂಬೈ ಎಂಬ ವಿರಾಟ್ ಜಗತ್ತಿನ ಸೂಕ್ಷ್ಮ ಚಹರೆಗಳನ್ನು ಕಾಣಿಸುವ ಈ ಚಿತ್ರದಲ್ಲಿ ವಿಚಿತ್ರವಾದ ಪ್ರೇಮಕಥೆಯಿದೆ. ಮಹಾನಗರವೆಂಬ ಬೃಹತ್ ಯಂತ್ರದ ಸಣ್ಣ ಸಣ್ಣ ಕೀಲುಗಳಾಗಿ ಉರುಳುತ್ತಲೇ ಇರುವ ಅದೆಷ್ಟೋ ಜನರು, ವೃತ್ತದೊಳಗೇ ಸುತ್ತುವ ತಮ್ಮ ಬದುಕಿನ ಗಡಿಗಳು ಹುಟ್ಟಿಸುವ ಏಕಾಕಿತನದಿಂದ ಕಂಗೆಟ್ಟಿರುತ್ತಾರೆ. ಅಲ್ಲಿಂದ ಬಿಡುಗಡೆ ಬಯಸುತ್ತಿರುತ್ತಾರೆ. ಹೀಗೆ ತಮ್ಮ ತಮ್ಮ ಬದುಕಿನ ಕ್ರೂರ ವೃತ್ತದೊಳಗಿನಿಂದ ಬಿಡುಗಡೆ ಪಡೆಯಲು ಹಂಬಲಿಸುತ್ತಿರುವ ಎರಡು ಮನಸ್ಸುಗಳಿಗೆ ಪ್ರೇಮವು ಒಂದು ಊರುಗೋಲಾಗಿ ಒದಗಿಬರುವ ಕಥೆ ಇಲ್ಲಿದೆ. ಹಾ, ಇಲ್ಲಿ ಪ್ರೇಮ ಈ ಜಗದಿಂದ ಜಿಗಿದು ಹಾರಲು ಇರುವ ಊರುಗೋಲಷ್ಟೇ. ಅದರ ಮೇಲೆಯೇ ಜೀವದ ಭಾರ ಹೇರಿ ನಡೆಯುವ ಆಧಾರವಲ್ಲ. ಇಲ್ಲಿನ ನಾಯಕ–ನಾಯಕಿ ಮನೆ ಬಿಟ್ಟು ಓಡಿಹೋಗಲು ನಿರ್ಧರಿಸಿ ಹೊರಟು, ಒಬ್ಬೊಬ್ಬರು ಒಂದೊಂದು ಬಸ್ ಹತ್ತಿ ಹೊರಟುಬಿಡುತ್ತಾರೆ. ಅವರಿಗೆ ತಮ್ಮ ಬದುಕಿನ ವೃತ್ತದಿಂದ ಬಿಡಿಸಿಕೊಳ್ಳುವ ಬಯಕೆಯೇನೋ ಇದೆ; ಆದರೆ ತಾವಿಬ್ಬರೂ ಒಂದಾಗಿ ಮತ್ತೊಂದು ಕಡೆಗೆ ಬದುಕು ಆರಂಭಿಸಿದರೆ ಅದೇ ವೃತ್ತವು ಮತ್ತೆ ನಮ್ಮನ್ನು ಸುತ್ತುವರಿಯುತ್ತದೇನೋ ಎಂಬ ಆತಂಕವೂ ಇದೆ.



ಜಯಂತ ಕಾಯ್ಕಿಣಿ ಚಿತ್ರ: ನವ್ಯಾ ಕಡಮೆ

ಮುಂಬೈಯನ್ನೂ ಪಾತ್ರಗಳ ಒಳಮನಸ್ಸನ್ನೂ ಬಹುಸೂಕ್ಷ್ಮ ಚಹರೆಗಳ ಮೂಲಕ ಕಟ್ಟಿಕೊಡುವ ಕಥೆಯನ್ನು ಅಷ್ಟೇ ಸಮರ್ಥವಾಗಿ ತೆರೆಯ ಮೇಲೆ ತಂದಿರುವ ಅಭಿಷೇಕ್ ಚೌಬೆ, ಹಲವು ಕಾಡುವ ದೃಶ್ಯಗಳನ್ನು ಪೋಣಿಸಿದ್ದಾರೆ.

ಕನ್ನಡದಲ್ಲಿ ಒಳ್ಳೆಯ ಬರಹಗಾರರಿಲ್ಲ ಎಂದು ದೂರುವ ನಿರ್ದೇಶಕರಿಗೆ ಉತ್ತರದಂತೆ ಈ ಆಂಥಾಲಜಿಯಿದೆ. ಅಷ್ಟೇ ಅಲ್ಲ, ಒಂದು ಕಥೆಯನ್ನು ಅದರ ಧ್ವನಿಶಕ್ತಿ ಕೆಡದ ಹಾಗೆ ತೆರೆಯ ಮೇಲೆ ಹೇಗೆ ಕಟ್ಟಬಹುದು ಎಂಬುದಕ್ಕೂ ಇದು ಒಂದು ಒಳ್ಳೆಯ ಮಾದರಿ. ಕನ್ನಡದಲ್ಲಿ ಜಯಂತ ಕಾಯ್ಕಿಣಿ ಅವರ ಕಥೆಗಳನ್ನೇ ಆಧರಿಸಿದ ಇತರ ಪ್ರಯತ್ನಗಳ ಜೊತೆಗೆ ಇದನ್ನು ಇಟ್ಟು ನೋಡಿದಾಗ ಈ ವಿಷಯ ಇನ್ನಷ್ಟು ಸ್ಪಷ್ಟವಾಗುತ್ತದೆ.

ಕನ್ನಡ ಸಾಹಿತ್ಯದಲ್ಲಿ ಇಂಥ ಹಲವು ಅತ್ಯಾಪ್ತ, ದೃಶ್ಯಮಾಧ್ಯಮಕ್ಕೆ ಹೊಂದುವಂಥ ಹಲವು ಕಥೆಗಳು ಇವೆ. ಆದರೆ ಒಳ್ಳೆಯ ಸಿನಿಮಾ ಮಾಡುವುದೂ ಅದಕ್ಕಾಗಿ ಓದಿನ ಪರಿಶ್ರಮ ಹಾಕುವುದೂ ತಮ್ಮ ಜವಾಬ್ದಾರಿ ಎಂದು ನಿರ್ದೇಶಕರಿಗೆ ಅನಿಸಬೇಕಷ್ಟೆ. ■




## ಉಪ್ಪಿ ಆ್ಯಕ್ಷನ್ ಕಟ್!

ತಮ್ಮ ವಿಚಿತ್ರ, ವಿಕ್ಷಿಪ್ತ ಸಿನಿಮಾಗಳಿಂದ 'ಬುದ್ಧಿವಂತ ನಿರ್ದೇಶಕ' ಎನಿಸಿಕೊಂಡಿರುವ ಉಪೇಂದ್ರ ಮತ್ತೆ ಆ್ಯಕ್ಷನ್ ಕಟ್ ಹೇಳುವುದಕ್ಕೆ ಸಜ್ಜಾಗಿದ್ದಾರೆ! 'ಉಪ್ಪಿ ಡೈರೆಕ್ಟ್ ಮಾಡ್ತಿದಾರೆ' ಎಂಬ ಸುದ್ದಿ ಆಗೀಗ ಗಾಂಧಿನಗರದ ಗಲ್ಲಿಗಳಲ್ಲಿ ಒಮ್ಮೆ ಸುತ್ತಿ ಸುಳಿದು ಹೋಗುತ್ತಲೇ ಇದ್ದರೂ ಇತ್ತೀಚೆಗೆ ಸೋಷಿಯಲ್ ಮೀಡಿಯಾದಲ್ಲಿ ಕಾಣಿಸಿಕೊಂಡ ಒಂದು ಪೋಸ್ಟರ್ ಸಂಚಲನವನ್ನೇ ಸೃಷ್ಟಿಸಿದೆ. ಉಪೇಂದ್ರ ನಿರ್ದೇಶನದ ಮುಂದಿನ ಚಿತ್ರದ ಪೋಸ್ಟರ್ ಎನ್ನಲಾದ ಇದು ಮೂರು ನಾಮದ ಚಿಹ್ನೆಯನ್ನು ಹೊಂದಿದೆ. ಅದನ್ನು ಹೇಗೆ ಓದುವುದು? ಅದರ ಅರ್ಥವೇನು? ಹಾಗಾದರೆ ಚಿತ್ರದ ಕಥೆ ಏನಿರಬಹುದು? 'ಸೂಪರ್' ಸಿನಿಮಾದಲ್ಲಿಯೂ ಇಂಥದ್ದೇ ಚಿಹ್ನೆ ಬಳಸಿದ್ದು ಅವರು ರಾಜಕೀಯದ ಕುರಿತ ಕಥೆಯನ್ನು ಮಾಡಿದ್ದರು. ಹಾಗಾದರೆ ಈಗ ಧರ್ಮದ ಕುರಿತು ಸಿನಿಮಾ ಮಾಡುತ್ತಿದ್ದಾರೆಯೇ? ಅಥವಾ ಈ ಚಿಹ್ನೆಯ ಅರ್ಥವೇ ಬೇರೆ ಇರಬಹುದೇ? ಇದೂ ರಾಜಕೀಯ ಕಥೆಯೇ ಇರಬಹುದೇ?

ಹೀಗೆ ಹತ್ತು ಹಲವು ರೀತಿಗಳಲ್ಲಿ ಚರ್ಚೆ ನಡೆಯುತ್ತಿದೆ. ಆದರೆ ಸ್ವತಃ ಉಪೇಂದ್ರ ಈ ಬಗ್ಗೆ ಏನೂ ಹೇಳಿಲ್ಲ. ಆದರೆ ಬಲ್ಲ ಮೂಲಗಳ ಪ್ರಕಾರ ಈ ಚಿತ್ರವನ್ನು ಪ್ರಿಯಾಂಕ ಉಪೇಂದ್ರ ಅವರು ನಿರ್ಮಾಣ ಮಾಡುತ್ತಿದ್ದಾರಂತೆ. ಕಥೆ, ಚಿತ್ರಕಥೆ, ಸಂಭಾಷಣೆ, ನಿರ್ದೇಶನ, ನಟನೆ ಎಲ್ಲವನ್ನೂ ಉಪೇಂದ್ರ ಮಾಡುತ್ತಿದ್ದಾರೆ. ಇದು ಬಹುಭಾಷೆಯಲ್ಲಿ ನಿರ್ಮಾಣವಾಗಲಿದೆ ಎನ್ನುತ್ತವೆ ಮೂಲಗಳು. ■